**ಮಾನ್ಯ ವಿಧಾನ ಪರಿಷತ್ತು ಸದಸ್ಯರುಗಳಾದ ಶ್ರೀ ಎಸ್.ವಿ.ಸಂಕನೂರ ಹಾಗೂ ಶ್ರೀಮತಿ ಉಮಾಶ್ರೀ ಇವರುಗಳ ಶೂನ್ಯ ವೇಳೆ ಪ್ರಸ್ತಾವಕ್ಕೆ ಸರ್ಕಾರದ ಉತ್ತರ.**
**(ಕ್ರಮ ಸಂಖ್ಯೆ: 3 (ಎ) ಮತ್ತು (ಬಿ), ದಿನಾಂಕ: 19.02.2024)**

**ವಿಷಯ:-**

ಪ್ರಪಂಚದಲ್ಲಿಯೇ ಭಾಷೆಗಾಗಿಯೇ ಇರುವ ಏಕೈಕ ಮತ್ತು ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲೊಂದಾದ ಮತ್ತು ಕನ್ನಡ ಭಾಷೆಯನ್ನು ಉಳಿಸಲು, ಬೆಳೆಸಲು ಮತ್ತು ಪ್ರಫುಲ್ಲಗೊಳಿಸುವ ನಿಟ್ಟಿನಲ್ಲಿ ಸ್ಥಾಪಿತವಾಗಿ "ವಿದ್ಯಾರಣ್ಯ" ಎಂಬ ಸಾರ್ಥಕನಾಮದಿಂದಲೇ ಪ್ರಸಿದ್ಧಿಹೊಂದಿದ ಹಂಪಿ ಕನ್ನಡ ವಿಶ್ವವಿದ್ಯಾಲಯವು ವಿಜಯನಗರ ಕಾಲದ ಮಂಟಪಗಳ ವಿಶಿಷ್ಟತೆಯಿಂದ ರೂಪುಗೊಂಡು ಕನ್ನಡ ಭಾಷೆಯ ಬಗ್ಗೆ ಬೆಳಕು ಚೆಲ್ಲುತ್ತಿದೆ.

ಆದರೆ ದಿನಾಂಕ:14.02.2024 ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಇಂದು ಇದೇ ಹಂಪಿ ವಿಶ್ವವಿದ್ಯಾಲಯಕ್ಕೆ ಬಳಕೆ ಮಾಡಿದ ವಿದ್ಯುತ್‌ನ ಬಾಕಿ ಬಿಲ್ ಅನ್ನು ಪಾವತಿಸಲು ಅನುದಾನದ ಕೊರತೆಯುಂಟಾಗಿದೆ ಎಂಬ ವಿಷಯ ಬೆಳಕಿಗೆ ಬಂದಿರುವುದು ವಿಷಾಧನೀಯ ಸಂಗತಿ. ವಿಶ್ವವಿದ್ಯಾಲಯವು 1,05,74,695/- ರೂ. ವಿದ್ಯುತ್ ಬಿಲ್ ಪಾವತಿ ಬಾಕಿ ಉಳಿಸಿಕೊಂಡಿದ್ದು, ಪಾವತಿಸದೇ ಹೋದರೆ ವಿದ್ಯುತ್ ಸರಬರಾಜುವನ್ನೇ ಕಡಿತಗೊಳಿಸುತ್ತೇವೆ ಎಂದು ಈ ಕುರಿತು ಜೆಸ್ಕಾಂನ ಕಮಲಾಪುರ ಕಾರ್ಯ ಮತ್ತು ಪಾಲನ ಶಾಖೆಯ ಸಹಾಯಕ ಇಂಜಿನೀಯರ್ ವಿವಿಯ ಕುಲಪತಿಗಳಿಗೆ ನೋಟಿಸ್ ನೀಡಿದೆ. ವಿದ್ಯುತ್ ಬಿಲ್ ಬಾಕಿ ಹಿನ್ನೆಲೆ ಕಳೆದ ಡಿಸೆಂಬರ್ ಅಂತ್ಯದಲ್ಲಿ ವಿವಿಯ ಸ್ಥಾವರಗಳ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಆ ಬಳಿಕ ನುಡಿಹಬ್ಬದ ಕಾರಣಕ್ಕೆ ಬಿಲ್ ಪಾವತಿಗೆ ಕಾಲಾವಕಾಶವನ್ನು ನೀಡಲಾಗಿತ್ತು. ಆಗ ಸರ್ಕಾರದಿಂದ ಅನುದಾನ ದೊರೆತು ಬಿಲ್ ಪಾವತಿಸುವ ವಿಶ್ವಾಸದಲ್ಲಿದ್ದ ವಿವಿಗೆ ಈಗ ಮತ್ತೊಮ್ಮೆ ನೋಟಿಸ್ ನೀಡಿರುವುದರಿಂದ ಮತ್ತೆ ಸಂಕಷ್ಟ ಎದುರಾಗಿದೆ.

ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಕೋರ್ಸ್ ವರ್ಕ್ಸ್ ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿದರೆ ವಿದ್ಯಾರ್ಥಿಗಳ ಓದಿಗೆ ಕಷ್ಟವಾಗುತ್ತದೆ. ಆದ್ದರಿಂದ ಇದೊಂದು ರಾಜ್ಯದ ಹೆಮ್ಮೆಯ ವಿಶ್ವವಿದ್ಯಾಲಯದ ಘನತೆಯ ಮತ್ತು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದ ವಿಷಯವಾಗಿರುವುದರಿಂದ ಈ ಕೂಡಲೇ ಬಾಕಿ ಉಳಿದಿರುವ ವಿದ್ಯುತ್ ಬಿಲ್ ಅನ್ನು ಪಾವತಿಸುವ ನಿಟ್ಟಿನಲ್ಲಿ ಅನುದಾನವನ್ನು ಬಿಡುಗಡೆ ಮಾಡಿ ವಿಶ್ವವಿದ್ಯಾಲಯಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಸ್ತಾಪಿಸಿರುವ ವಿಷಯದ ಕುರಿತು.

**ಉತ್ತರ:-**

ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಕನ್ನಡ ವಿಶ್ವವಿದ್ಯಾಲಯಕ್ಕೆ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ ಕಳೆದ ಮೂರು ಆರ್ಥಿಕ ಸಾಲಿನ ಆಯ-ವ್ಯಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಹಂಚಿಕೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ:-

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿಶ್ವವಿದ್ಯಾಲಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಉಪ ಲೆಕ್ಕ ಶೀರ್ಷಿಕೆ | 2021-22 | 2022-23 | 2023-24 |
|---|---|---|---|---|---|
| 1 | ಕನ್ನಡ ವಿಶ್ವವಿದ್ಯಾಲಯ 2202-03-102-0-06 | 101-ಸಹಾಯಾನುದಾನ-ವೇತನಗಳು | 2443.58 | 2702.00 | 2759.00 |
| | | 118-ಸಹಾಯಾನುದಾನ-ವಿಶ್ರಾಂತಿ ವೇತನ | 255.00 | 1331.00 | 929.66 |

| ಕ್ರ. ಸಂ | ವಿಶ್ವವಿದ್ಯಾಲಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಉಪ ಲೆಕ್ಕ ಶೀರ್ಷಿಕೆ | 2021-22 | 2022-23 | 2023-24 |
|---|---|---|---|---|---|
| | | 102-ಸಹಾಯಾನುದಾನ ಸಾಮಾನ್ಯ | 119.34 | 464.00 | 152.00 |
| | | 422-ಪರಿಶಿಷ್ಟ ಜಾತಿ ಉಪಯೋಜನೆ | 33.00 | 26.00 | 34.00 |
| | | 423- ಗಿರಿಜನ ಉಪಯೋಜನೆ | 17.00 | 10.00 | 14.00 |

ಕಳೆದ ಮೂರು ವರ್ಷಗಳಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಈ ವಿಶ್ವವಿದ್ಯಾಲಯಕ್ಕೆ ಆಯಾ ಆರ್ಥಿಕ ಸಾಲಿನ ಆಯವ್ಯಯ ಹಂಚಿಕೆಯಂತೆ ವೇತನ/ವಿಶ್ರಾಂತಿ ವೇತನ/ಸಾಮಾನ್ಯ/ಪರಿಶಿಷ್ಟ ಜಾತಿ ಉಪಯೋಜನೆ/ ಗಿರಿಜನ ಉಪಯೋಜನೆ ಅಡಿಯಲ್ಲಿ ಒದಗಿಸಲಾಗಿರುವ ಅನುದಾನವನ್ನು ನಿಯಮಾನುಸಾರ ಸದರಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆಗೊಳಿಸಲಾಗಿದೆ.

ಹಾಗೂ 2022-23ನೇ ಆರ್ಥಿಕ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-105ರಲ್ಲಿನ ಘೋಷಣೆಯಂತೆ "ಕರ್ನಾಟಕದ ಶ್ರೀಮಂತ ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಯ ಅಧ್ಯಯನ ಕೇಂದ್ರವಾಗಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯವನ್ನು ಇನ್ನಷ್ಟು ಬಲಪಡಿಸಲು ಹಾಗೂ ಮತ್ತಷ್ಟು ರಚನಾತ್ಮಕ ಚಟುವಟಿಕೆಗಳನ್ನು ಕೈಗೊಳ್ಳಲು" ಅನುಮತಿ ನೀಡಿದೆ ಹಾಗೂ 2022-23ನೇ ಆರ್ಥಿಕ ಸಾಲಿನ ಲೆಕ್ಕ ಶೀರ್ಷಿಕೆ: 2202-03-102-0-06-103-ಸಹಾಯಾನುದಾನ ಸಾಮಾನ್ಯ, 422-ಪರಿಶಿಷ್ಟ ಜಾತಿ ಉಪಯೋಜನೆ, 423-ಗಿರಿಜನ ಉಪಯೋಜನೆ ಅಡಿಯಲ್ಲಿ ಒದಗಿಸಿರುವ ಒಟ್ಟಾರೆ ರೂ.500.00ಲಕ್ಷಗಳನ್ನು ಬಿಡುಗಡೆಗೊಳಿಸಿ ಆದೇಶಿಸಿದೆ.

ಮುಂದುವರೆದು, ವಿಶ್ವವಿದ್ಯಾಲಯದ ಅಭಿವೃದ್ಧಿ ಕಾಮಗಾರಿಗಳು, ಕುಡಿಯುವ ನೀರಿನ ಕಾಮಗಾರಿ ಮತ್ತು ಇತರೆ ಕಟ್ಟಡ ಕಾಮಗಾರಿಗಳು, ತಾತ್ಕಾಲಿಕ ನೌಕರರಿಗೆ ಸಂಬಳ ಮತ್ತು ವಿದ್ಯಾರ್ಥಿಗಳ ಪ್ರೋತ್ಸಾಹ, ವಿದ್ಯುತ್ ಬಿಲ್ ಪಾವತಿಯನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಬಳಕೆ ಮಾಡಿಕೊಳ್ಳಬೇಕಿದೆ.

ಸಂಖ್ಯೆ: ಇಡಿ 48 ಹೆಚ್‌ಪಿಯು 2024)

(ಡಾ.ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು.